**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 249/2017 ಪಿಡಬ್ಲ್ಯೂ-1**

ದಿನಾಂಕ 20/06/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರಿಂದಃ**

ದಿಃ 25.01.2022 ರಂತೆ ಮಾನ್ಯ ನ್ಯಾಯಾಲಯದಿಂದ ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ಹರಿಹರ ಶಾಖೆರವರಿಗೆ ಕೇಳಿದ 8 ದಾಖಲೆಗಳ ಪೈಕಿ 6 ಮತ್ತು 7 ನೇ ದಾಖಲೆಗಳನ್ನು ಬ್ಯಾಂಕಿನ ಅಧಿಕಾರಿಗಳು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುವುದಿಲ್ಲ. ಸದರಿ 6 ಮತ್ತು 7 ನೇ ಕ್ರಮ ಸಂಖ್ಯೆ ದಾಖಲೆಗಳ ಮೂಲ ಪ್ರತಿಗಳು ಬ್ಯಾಂಕಿನ ಸುಪರ್ಧಿಯಲ್ಲಿರುತ್ತವೆ ಸದರಿ ದಾಖಲೆಗಳ ಜೆರಾಕ್ಸ ಪ್ರತಿ ನನ್ನ ಬಳಿ ಇರುತ್ತವೆ. ಸದರಿ ದಾಖಲೆಗಳಲ್ಲಿ ನಾನು ಪಡೆದ ಮೂಲ ವೇತನದ ಬಗ್ಗೆ ನಕಲಿ ಸಂಖ್ಯೆಗಳನ್ನು ಸೃಷ್ಟಿಸಿದ ಬಗ್ಗೆ ಇರುತ್ತದೆ. ಸದರಿ ನಕಲಿ ಎಂಟ್ರಿಗಳನ್ನು 9 ನೇ ಆರೋಪಿ 1 ನೇ ಆರೋಪಿಯಿಂದ ಮಾಡಿಸಿರುತ್ತಾನೆ. ಸದರಿ ವಿಷಯವಾಗಿ ನಾನು ಬ್ಯಾಂಕಿನ ಒಂಬಡ್ಸ್ ಮನ್, ಬ್ಯಾಂಕಿನ ವಿಜಿಲೆನ್ಸ್ ಮತ್ತು ರಿಜಿನಲ್ ಬ್ಯಾಂಕಿಗೆ ದೂರು ಕೊಟ್ಟಿರುತ್ತೇನೆ. ಸದರಿ ಬ್ಯಾಂಕಿನವರು ನನ್ನ ವಿರುದ್ಧ ಹಣ ವಸೂಲಾತಿಗಾಗಿ ಒಂದು ಸಿವಿಲ್ ದಾವೆ ಓ ಎಸ್ 37/2009 ನೇದನ್ನು ಸಹ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ನಾನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದ 2 ನೇ ಪುಟದಲ್ಲಿ ಪ್ರಸ್ತುತ ಕ್ರಿಮಿನಲ್ ಪ್ರಕರಣ ಚಾಲ್ತಿಯಿರುವ ಬಗ್ಗೆ ಹೇಳಿರುತ್ತೇನೆ ಸದರಿ ಪ್ರಮಾಣ ಪತ್ರದ ಆಧಾರದ ಮೇರೆಗೆ ಬ್ಯಾಂಕಿನವರು ನನ್ನ ಮೇಲೆ ಹೂಡಿರುವ ಸಿವಿಲ್ ದಾವೆಯನ್ನು ಹಿಂಪಡೆದುಕೊಂಡಿರುತ್ತಾರೆ. ಸದರಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿರುತ್ತದೆ. ಅದೇ ರೀತಿ ಬ್ಯಾಂಕ್ ನವರು ನ್ಯಾಯಾಲಯದ ಆದೇಶದ ಮೇರೆಗೆ ನಿಪಿ-12 ಮತ್ತು 13 ರಂತೆ ಹಾಜರುಪಡಿಸಿದ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಸಹ ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ. ಈ ರೀತಿ ಬ್ಯಾಂಕಿನ ಅಧಿಕಾರಿಗಳು 1 ನೇ ಆರೋಪಿಯ ಚಿತಾವಣೆ ಮೇರೆಗೆ ನನಗೆ ಹಾಗೂ ಇತರೆ ಬ್ಯಾಂಕಿನ ಗ್ರಾಹಕರಿಗೆ ಮೋಸ ಮಾಡಿರುತ್ತಾರೆ. ಬೇರೆ ಯಾವುದೋ ವ್ಯಕ್ತಿ ಹೆಸರಿಗೆ ಪಡೆದ ಸಾಲವನ್ನು ನನ್ನ ಖಾತೆಯಿಂದ ಕಡಿತಗೊಳಿಸಿ, ನನಗೆ ಮೋಸ ಮಾಡಿರುತ್ತಾರೆ. ಸದರಿ ಎಲ್ಲಾ ವ್ಯವಹಾರಗಳ ಹಿಂದೆ ಆರೋಪಿಯ ಕೈವಾಡವಿದ್ದು, ಆತನ ಚಿತಾವಣೆಯಿಂದ ಆಗಿರುತ್ತದೆ. ಆದ್ದರಿಂದ ನನ್ನ ಪಿರ್ಯಾದಿಯಲ್ಲಿ ಕೇಳಿಕೊಂಡಂತೆ ಆರೋಪಿತರಿಗೆ ಶಿಕ್ಷೆಯಾಗಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಿದ್ದು, ಮಂಜೂರು ಮಾಡಿ ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.